**O. S. No:65/2019**
**PW : 1**

(ಇಂದು ದಿನಾಂಕಃ **23-01-2023** ರಂದು ಸಾಕ್ಷಿಯನ್ನು ತೆರೆದ ನ್ಯಾಯಾಲಯಕ್ಕೆ ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.)

**ಪಾಟೀ ಸವಾಲುಃ ಶ್ರೀ ವಿ ಟಿ ಕೆ ವಕೀಲರಿಂದ:**

ನನ್ನ ಅಜ್ಜಿ ಭೀಮವ್ವಳ ತಂದೆಯ ಹೆಸರು ಬಸಪ್ಪ ಹಂಚಿನಾಳ. ದಾವಾ ಸ್ವತ್ತುಗಳು ಮೂಲತಃ ಬಸಪ್ಪ ಹಂಚಿನಾಳ ರವರಿಗೆ ಸೇರಿತ್ತು ಎಂದರೆ ಸರಿ.

2. ದಾವಾ 3 ನೇ ಸ್ವತ್ತನ್ನು ಬಸಪ್ಪ ಹಂಚಿನಾಳರವರು ನನ್ನ ತಂದೆಗೆ ವಿಲ್ ಮೂಲಕ ಕೊಟ್ಟಿದ್ದರು ಎಂದರೆ ಸರಿ. ಸದರಿ ದಾವಾ 3 ನೇ ಸ್ವತ್ತು ನನ್ನ ತಂದೆಗೆ ಸ್ವಯಾಜಿತ ಆಸ್ತಿ ಆಗುತ್ತದೆ ಎಂದರೆ ಸರಿ. ನನ್ನ ತಂದೆಯವರು 1 ನೇ ಪ್ರತಿವಾದಿಗೆ ಹಕ್ಕು ಬಿಡುಗಡೆಯ ಮೂಲಕ ದಾವಾ 3 ನೇ ಸ್ವತ್ತನ್ನು ಬಿಟ್ಟುಕೊಟ್ಟರು ಎಂದರೆ ಸುಳ್ಳು. ದಾವಾ 3 ನೇ ಸ್ವತ್ತು 1 ನೇ ಪ್ರತಿವಾದಿಯ ಹೆಸರಿನಲ್ಲಿದೆ ಎಂದರೆ ಸರಿ. ಅದು ಅವನಿಗೆ ಹೇಗೆ ಬಂತು ಎಂದು ನಾನು ರೆವಿನ್ಯೂ ದಾಖಲೆ ನೋಡಿಲ್ಲ. ಆತನ ಹೆಸರಿನಲ್ಲಿ ಯಾವ ಆಧಾರದ ಮೇಲೆ ದಾಖಲಾಗಿದೆ ಗೊತ್ತಿಲ್ಲ. ನನ್ನ ತಂದೆ ದಾವಾ 3 ನೇ ಸ್ವತ್ತನ್ನು 1 ನೇ ಪ್ರತಿವಾದಿಗೆ ಡ ನಂಃ 3060 ರ ಪ್ರಕಾರ ಬಿಟ್ಟು ಕೊಟ್ಟಿದ್ದರು ಎಂದರೆ ಗೊತ್ತಿಲ್ಲ. ನಾನು ರೆವಿನ್ಯೂ ದಾಖಲೆ ತೆಗೆಸಿದ ಮೇಲೆ ಈ ಬಗ್ಗೆ ಗೊತ್ತಾಯಿತು. ಈ ವಿಷಯವನ್ನು ನನ್ನ ವಾದ ಪತ್ರದಲ್ಲಿ ಬರೆಸಿಲ್ಲ ಎಂದರೆ ಸರಿಯಲ್ಲ. ಆ ರೀತಿ ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಬಸಪ್ಪ ಹಂಚಿನಾಳ ರವರಿಗೆ ಭೀಮವ್ವ ಒಬ್ಬಳೇ ಮಗಳು. ಸರ್ವೆ ನಂಃ 41 ರ ಸ್ವತ್ತನ್ನು ಬಸಪ್ಪ ಹಂಚಿನಾಳರವರು ಭೀಮವ್ವಳಿಗೆ ದಿಃ 14.03.1950 ರಲ್ಲಿ ಮೃತ್ಯು ಪತ್ರದ ಮೂಲಕ ಕೊಟ್ಟರು ಎಂದರೆ ಸರಿ. ಭೀಮವ್ವಳಿಗೆ ಚವರಡ್ಡಿ ಮತ್ತು ಹೇಮರಡ್ಡಿ ಮಕ್ಕಳು ಎಂದರೆ ಸರಿ. ಅವರಿಗೆ ಬೇರೆ ಗಂಡು ಮಕ್ಕಳಿಲ್ಲ. ಆ ಮೃತ್ಯು ಪತ್ರದಲ್ಲಿ ಚವರಡ್ಡಿ ಮತ್ತು ಹೇಮರಡ್ಡಿ ಅಲ್ಲದೇ ಬೇರೆ ಗಂಡು ಮಕ್ಕಳು ಹುಟ್ಟಿದರೆ ಅವರಿಗೆ ಮೃತ್ಯು ಪತ್ರದಲ್ಲಿರುವ ಸ್ವತ್ತುಗಳು ಹೋಗಬೇಕೆಂದು ಬಸಪ್ಪ ಹಂಚಿನಾಳರವರ ಇಚ್ಛೆಯಾಗಿತ್ತು ಎಂದರೆ ಸರಿ.

3. ಸರ್ವೆ ನಂಃ 41 ರ ವಿಷಯವಾಗಿ ಮಿಸಲೆನಿಯಸ್ ಪೇಟಿಷನ ನಂಃ 4/2022 ವಿಲೇಗೆ ಬಾಕಿ ಇದೆ ಎಂದರೆ ಗೊತ್ತಿಲ್ಲ. ಆ ರೀತಿ ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನಾನು ಪ್ರತಿವಾದಿಯವರು ಸಲ್ಲಿಸಿದ ಪ್ರತಿವಾದ ಪತ್ರವನ್ನು ಓದಿಲ್ಲ. ಆದರೆ ನನ್ನ ವಕೀಲರು ನನಗೆ ಹೇಳಿದ್ದಾರೆ. ಓ ಎಸ್ ನಂಃ 158/2011 ರಾಜೀ ಡಿಕ್ರಿಯಾಗಿದೆ ಎಂದರೆ ಸರಿ. ಪ್ರತಿವಾದಿ 1 ನೇಯವರಿಗೆ ಸರ್ವೆ ನಂಃ 41 ರ ಬಗ್ಗೆ ವಿಲ್ ಆದ ಬಗ್ಗೆ ಮುಚಿಟ್ಟು ಸದರಿ ರಾಜೀ ಡಿಕ್ರಿ ಮಾಡಿಕೊಳ್ಳಲಾಗಿದೆ ಎಂದರೆ ಸರಿಯಲ್ಲ. ಚವರಡ್ಡಿ ತೀರಿ ಹೋಗಿದ್ದಾರೆ. ಆತನಿಗೆ ಲಿಂಗರಡ್ಡಿ ಮತ್ತು ಲೀಲಾ ಮಕ್ಕಳು ಎಂದರೆ ಸರಿ. 1 ನೇ ಪ್ರತಿವಾದಿ, ಲಿಂಗರಡ್ಡಿ ಮತ್ತು ಲೀಲಾ ಓ ಎಸ್

ನಂಃ 158/2011 ರ ರಾಜೀ ಡಿಕ್ರಿ ಮೋಸದಿಂದ ಮಾಡಿಕೊಳ್ಳಲಾಗಿದೆ ಎಂದು ಮಿಸಲೆನಿಯಸ್ ಪೇಟಿಷನ ನಂಃ 4/2022 ನ್ನು ದಾಖಲಿಸಿದ್ದಾರೆ ಎಂದರೆ ಗೊತ್ತಿಲ್ಲ. ಆ ರೀತಿ ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಸರ್ವೇ ನಂಃ 41, 1 ನೇ ಪ್ರತಿವಾದಿಯ ಸ್ವಯಾಜಿತ ಸ್ವತ್ತುಯಾಗುತ್ತದೆ ಎಂದರೆ ಸುಳ್ಳು. ವಿ ಪಿ ಸಿ ನಂಃ 299 ನ್ನು ನನ್ನ ತಂದೆಯವರು ಖರೀದಿಸಿದ್ದರು ಎಂದರೆ ಸರಿ. ನಾನು ಪ್ರತಿವಾದಿ 2 ರಿಂದ 4 ನೋಟರಿಯವರ ಮುಂದೆ ದಿಃ 28.05.2018 ರಂದು ಹಕ್ಕು ಬಿಟ್ಟು ಪತ್ರದ ಮೂಲಕ ವಿ ಪಿ ಸಿ ನಂಃ 299 ನ್ನು 1 ನೇ ಪ್ರತಿವಾದಿಗೆ ಬಿಟ್ಟು ಕೊಟ್ಟಿದ್ದೇವೆ ಎಂದರೆ ಸರಿಯಲ್ಲ. ಸದರಿ ಹಕ್ಕು ಬಿಡುಗಡೆ ಪತ್ರದಲ್ಲಿರುವ ಸಹಿ ನನ್ನದೇ ಎಂದರೆ ಸರಿ . ಸದರಿ ಹಕ್ಕು ಬಿಡುಗಡೆ ಪತ್ರವನ್ನು **ನಿ. ಡಿ. 1** ಮತ್ತು ಸಹಿಯನ್ನು **ನಿ. ಡಿ. 1 (ಎ)** ಎಂದು ಗುರುತಿಸಲಾಯಿತು. ವಿ ಪಿ ಸಿ ನಂಃ 299 ರ ಪಂಚಾಯಿತಿ ದಾಖಲೆಯಲ್ಲಿ ಪ್ರತಿವಾದಿ 1 ನೇಯವರ ಹೆಸರು ದಾಖಲೆಯಲ್ಲಿದೆ ಎಂದರೆ ಸರಿ. ಸರ್ವೇ ನಂಃ 124 ಬಸಪ್ಪ ಹಂಚಿನಾಳ ರವರಿಗೆ ಸೇರಿದ ಜಮೀನು. ಸದರಿ ಸ್ವತ್ತನ್ನು ಭೀಮವ್ವ ಚವರಡ್ಡಿ ಮತ್ತು ಹೇಮರಡ್ಡಿಗೆ ಮೃತ್ಯು ಪತ್ರದ ಮೂಲಕ ಕೊಟ್ಟಿದ್ದರು ಎಂದರೆ ಸರಿ . ಭೀಮವ್ವಳಿಗೆ ಸದರಿ ಸರ್ವೇ ನಂಃ 124 ರ ಸ್ವತ್ತು ಅವರ ತಂದೆಯವರಿಂದ ಬಂದಿತ್ತು. ಸರ್ವೇ ನಂಃ 124 ಚವರಡ್ಡಿ ಮತ್ತು ಹೇಮರಡ್ಡಿಯವರ ಸ್ವಯಾಜಿತ ಆಸ್ತಿಯಾಗುತ್ತದೆ ಎಂದರೆ ಸರಿಯಲ್ಲ. ಆ ರೀತಿ ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ . ವಿ ಪಿ ಸಿ ನಂಃ 31 ಭೀಮವ್ವಳಿಗೆ ಅವರ ತಂದೆಯಿಂದ ಬಂದಿತ್ತು. ಅದು ಆಕೆಯ ಸ್ವಯಾಜಿತ ಸ್ವತ್ತು ಆಗುತ್ತದೆ ಎಂದರೆ ಸರಿ. ಭೀಮವ್ವ ಸದರಿ ಸ್ವತ್ತನ್ನು ತನ್ನ ಎರಡು ಗಂಡು ಮಕ್ಕಳಿಗೆ ಬಿಟ್ಟು ಕೊಟ್ಟಿದ್ದರು ಮತ್ತು ಅದು ಪಂಚಾಯಿತಿಯಲ್ಲಿ ದಾಖಲಾಗಿದೆ ಎಂದರೆ ಸರಿ. ದಾವಾ ಸ್ವತ್ತುಗಳು ನನ್ನ ಅಜ್ಜ ಭೀಮರಡ್ಡಿಯ ಸ್ವತ್ತುಗಳಲ್ಲ ಎಂದರೆ ಸರಿ. ಆ ಕಾರಣಕ್ಕೆ ನನಗೆ ದಾವಾ ಸ್ವತ್ತುಗಳಲ್ಲಿ ಹಕ್ಕು ಮತ್ತು ಹಿತಾಸಕ್ತಿಗಳಿಲ್ಲ ಎಂದರೆ ಸರಿ . ನಾನು ಪ್ರತಿವಾದಿ 2 ರಿಂದ 4 ರವರ ಮಾತು ಕೇಳಿಕೊಂಡು ಯಾವುದೇ ಹಕ್ಕು ಇಲ್ಲದಿದ್ದರೂ ಸುಳ್ಳು ದಾವೆ ಮಾಡಿ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರು ವಿಚಾರಣೆ ಇಲ್ಲ.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಬೆರಳಚ್ಚು ಮಾಡಲಾಯಿತು.)

ಓ. ಹೇ. ಕೇ. ಸರಿ. ಇದೆ .

ಸಹಿ/-

ಹಿರಿಯ ದಿವಾಣಿ ನ್ಯಾಯಾಧೀಶರು ಹಾಗೂ ಜೆ.ಎಂ.ಎಫ್.ಸಿ
ನವಲಗುಂದ.